ಶ್ರೀ ಎ. ರಾಮದಾಸ್:- ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ? ಸುಮಾರು ಎಂಟು ವರ್ಷಗಳ ಕಾಲದಿಂದ ಹಾಗೆಯೇ ಉಳಿದಿದೆ. ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಹಣ ರಿಕವರಿ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಿರೋ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಅತೀ ಶೀಘ್ರದಲ್ಲಿಯೇ ಅದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್:- ಶೀಘ್ರ ಎನ್ನುವುದು ಬೇಡ, ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ? ಏಕೆಂದರೆ ಎಂಟು ವರ್ಷಗಳ ಕಾಲದಿಂದ ಉಳಿದಿರುವಂಥದ್ದು. ಒಂದು ಡೀಕೇಡ್ ಆಗುತ್ತಾ ಇದೆ.

ಅಧ್ಯಕ್ಷರು:- ರಾಮದಾಸ್‌ರವರೇ, ಕೆಲಸವಾಗಲಿ ಬಿಡಲಿ, ಅವರು ಹೇಳಿದ್ದಕ್ಕೆ ನೀವು ಖುಷಿ ಪಡಬೇಕು.

4) ಅಲ್ಪ ಕಾಲಾವಧಿ ಪ್ರಶ್ನೆ

ವಿಷಯ:- ತುಮಕೂರಿನ ಬಳಿ ಸ್ಟಾರ್ ಟಿ.ವಿ.ಗಾಗಿ ಸರ್ಕಾರಿ ಜಮೀನು ಮಂಜೂರು.

1 (5) **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೆಪಲ್ಲಿ):-** ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರಿನ ಬಳಿ ಸ್ಟಾರ್ ಟಿ.ವಿ.ಯನ್ನು ಆಪ್‌ಲಿಂಕ್ ಮಾಡುವ ಸಲುವಾಗಿ ಶ್ರೀ ರೂಪರ್ಟ್ ಮರ್ಡೋಕ್‌ರವರಿಗೆ 5,000 ಎಕರೆ ಭೂಮಿಯನ್ನು ಮಂಜೂರು ಮಾಡುವ ಪ್ರಯತ್ನ ನಡೆದಿರುವ ವಿಚಾರವು ಸರ್ಕಾರದ ಗಮನಕ್ಕೆ ಗೊತ್ತಿದೆಯೇ?

ಆ) ಒಂದು ವೇಳೆ ಸ್ಟಾರ್ ಟಿ.ವಿ. ಆಪ್‌ಲಿಂಕ್ ಮಾಡಲು ಸರ್ಕಾರವು ಭೂಮಿಯನ್ನು ಮಂಜೂರು ಮಾಡಿದ ವರ್ಷದಲ್ಲಿ ನಮ್ಮ ರಾಜ್ಯದ: ರಾಷ್ಟ್ರದ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ?

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ರೂಪರ್ಟ್ ಮುರ್ಡೋಕ್‌ರವರು ಪ್ರಸಾರ ಮಾಧ್ಯಮದ ಒಬ್ಬ ಗುತ್ತಿಗೆದಾರರು. ಹಾಂಕಾಂಗ್‌ನಲ್ಲಿರತಕ್ಕಂಥ . . .

ಅಧ್ಯಕ್ಷರು:- ಪ್ರಶ್ನೆ ಕೇಳಿ ಅಷ್ಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಪ್ರಶ್ನೆಯೇ ಅದು. ಕೇಳಿದ್ದೇನೆ ಎಂದು ಹೇಳಿದೆ.

ಅಧ್ಯಕ್ಷರು:- ಈಗ ಉತ್ತರ ಬಂದಿದೆ. ಈಗ ಉಪಪ್ರಶ್ನೆ ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಈ ಪ್ರಶ್ನೆಗೆ ಅವರು ಒಂದು ಉತ್ತರ ಕೊಟ್ಟಿದ್ದಾರೆ. 25ನೇ ತಾರೀಖಿಗೆ ಕೊಟ್ಟಿರತಕ್ಕಂಥ . . .

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೇ, ಪ್ರಶ್ನೆ ನಾನು ಕೇಳಿದ್ದೇನೆ. ಇದಕ್ಕೆ ನನಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು:- ವಾಟಾಳರೇ, ನೀವೇ ನನ್ನ ರಕ್ಷಣೆಗೆ ಬರಬೇಕು.

ಶ್ರೀ ವಾಟಾಳ್ ನಾಗರಾಜ್:- ನನ್ನನ್ನು ಏಕೆ ಎಳೆಯುತ್ತಿದ್ದೀರಿ ನೀವು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವೇ ಪ್ರಶ್ನೆ ಕೇಳಿ ಎಂದು ಹೇಳಿದಿರಲ್ಲಾ, ಅದಕ್ಕೆ ಅವರು ಅಧ್ಯಕ್ಷರಿಗೆ ಹೇಳಿದ್ದುದು. ಸ್ವಲ್ಪ ಜಾಸ್ತಿ ಪ್ರೀತಿ ಮಾಡಿದರೆ ಹೀಗೇ ಆಗುತ್ತವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅಧ್ಯಕ್ಷರಿಗೆ ಪ್ರೀತಿ ಕಡಿಮೆಯಾಗಿಬಿಟ್ಟಿದೆ.

ಅಧ್ಯಕ್ಷರು:- ನಾನು ಎಷ್ಟು ಜನರನ್ನು ಎಂದು ಪ್ರೀತಿ ಮಾಡಲಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅವರು ಒದಗಿಸಿರುವುದರಲ್ಲಿ ಏನೂ ಇಲ್ಲ. ಎರಡಕ್ಕೂ 'ಇಲ್ಲ' 'ಇಲ್ಲ' ಎಂದು ಹೇಳಿದ್ದಾರೆ. ನಿರ್ದಿಷ್ಟನಾಗಿ ನಾನು ಈ ಉತ್ತರವನ್ನು ಒಪ್ಪಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಇದು ಬಹಳ ಗಂಭೀರವಾಗಿ ಇಡೀ ಕರ್ನಾಟಕ ರಾಜ್ಯದ ಜನತೆಗೆ ಅಷ್ಟೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಪ್ರಶ್ನೆ ಕೇಳಿಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಕೇಳಿದೆ. ನಿವು ಕೇಳಿಸಿಕೊಳ್ಳಲಿಲ್ಲ ಅಷ್ಟೆ. ನೀವು ಇಲ್ಲ ಎಂದು ಹೇಳಿದಿರಲ್ಲಾ. ನೀವು 'ಇಲ್ಲ' ಎಂದರೂ ನಾನು ಕುಳಿತುಕೊಳ್ಳಬೇಕೇ? ಒಳ್ಳೆ ಕಥೆಯಾಯಿತಲ್ಲಾ. ನೀವು ಇಲ್ಲ ಎಂದಾಕ್ಷಣ ನಾನು ಕುಳಿತುಕೊಳ್ಳಬೇಕೇ? ಹಾಗಾದರೆ ನಾನೇಕೆ ಪ್ರಶ್ನೆಯನ್ನು ಕೇಳಬೇಕು?

ಅಧ್ಯಕ್ಷರು:- ಆಲ್‌ರೈಟ್. ನೀವು 'ಇದೆ' ಎಂದು ಆದೇನು ಕೇಳುತ್ತೀರೋ ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- 'ಇಲ್ಲ' ಎಂದು ಹೇಳಿಬಿಟ್ಟರೆ ಸುಮ್ಮನೆ ಕುಳಿತುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರು ಅಪ್ಪಣೆ ಕೊಟ್ಟು ಬಿಟ್ಟರೆ ಕುಳಿತುಬಿಡುತ್ತೇನೆ. ಮತ್ತೆ ನಾನೇಕೆ ಪ್ರಶ್ನೆ ಕೇಳಬೇಕು. ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದೀರಿ. ಅದನ್ನು ನಾನಂತೂ ಒಪ್ಪಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಇಡೀ ಕರ್ನಾಟಕ ರಾಜ್ಯದಲ್ಲಷ್ಟೇ ಅಲ್ಲ, ಇಡೀ ಭಾರತ ದೇಶದ ಜನ ಬಹಳ ಗುಮಾನಿಯಿಂದ ನೋಡುತ್ತಿರುವ ಪ್ರಶ್ನೆ ರೂಪರ್ಟ್ ಮುರ್ಡೋಕ್ ಎನ್ನುವ ಒಬ್ಬ ಮನುಷ್ಯ ಇಡೀ ಜಗತ್ತಿನ ಪ್ರಸಾರ ಮಾಧ್ಯಮದ ಮೇಲೆ ತನ್ನ ಹಿಡಿತವನ್ನು ಸಾಧಿಸಲು ಹೊರಟು ಅನೇಕ ಸರ್ಕಾರಗಳನ್ನು ಉರುಳಿಸಿರುವ ಉದಾಹರಣೆಗಳು ಇವೆ. ಇವತ್ತು ಆಸ್ಟ್ರೇಲಿಯಾದ ಅಧ್ಯಕ್ಷರನ್ನು ಚುನಾವಣೆಯಲ್ಲಿ ಸೋಲಿಸಲಿಕ್ಕೆ ಕಾರಣನಾದ ಒಬ್ಬ ಮನುಷ್ಯ ಈತ. ರಾಜಕೀಯದ ಪ್ರಶ್ನೆ ಬೇಡ. ಅದಕ್ಕಿಂತ ಮುಖ್ಯವಾಗಿ ಹಾಂಕಾಂಗ್‌ನಲ್ಲಿರುವ ತನ್ನ ಸ್ಟಾರ್ ಟಿ.ವಿ.ಯ ಅಪ್‌ಲಿಂಕಿಂಗ್ ಫೆಸಿಲಿಟೀಸ್‌ನ್ನು ಭಾರತ ದೇಶಕ್ಕೆ ತರಬೇಕು, ಅದರಲ್ಲಿ ಮುಖ್ಯವಾಗಿ ತುಮಕೂರಿನ ಹತ್ತಿರ ಸ್ಥಾಪನೆ ಮಾಡಬೇಕು ಎಂದು ಹೇಳಿ ಪ್ರಯತ್ನ ನಡೆಯುತ್ತಿದೆ.

ಏಕೆಂದರೆ ಹಾಂಕಾಂಗ್ ಎರಡು ಸಾವಿರ ಇಸವಿಯೊಳಗೆ ಚೈನಾದ ಹಿಡಿತಕ್ಕೆ ಹೋಗುತ್ತದೆ, ಆದ್ದರಿಂದ ಅಲ್ಲಿ ತನ್ನ ವ್ಯವಹಾರ ವ್ಯಾಪಾರಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿ ಅದನ್ನು ಹಾಂಕಾಂಗ್ ನಿಂದ ಭಾರತದೇಶಕ್ಕೆ ಬದಲಾವಣೆ ಮಾಡಬೇಕು ಎಂದು ಪ್ರಯತ್ನ ಮಾಡುತ್ತಿರತಕ್ಕಂಥದ್ದರಲ್ಲಿ ತುಮಕೂರಿನಲ್ಲಿ ಎಂಟು ಸಾವಿರ ಎಕರೆ ಭೂಮಿಯನ್ನು ಕೊಂಡು ಕೊಳ್ಳಲಿಕ್ಕೆ ಈಗಾಗಲೇ ಹೋಗಿ ನೋಡಿಕೊಂಡು ಬಂದು ಸರ್ಕಾರದ ಜೊತೆ ಮಾತುಕತೆ ನಡೆಸಿದ್ದಾರೆ ಎಂದು ಎಲ್ಲಾ ಪತ್ರಿಕೆಗಳು ಕೂಡಾ ಬರೆದಿವೆ. ಎರಡನೆಯದು ರೂಪರ್ಟ್ ಮುರ್ಡೋಕ್‌ಗೆ ಭಾರತ ದೇಶದ ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್, ಬಾಂಬೆ ಕೋರ್ಟ್ ನಾನ್‌ಬೇಲಬಲ್ ವಾರಂಟನ್ನು ಕೊಟ್ಟಿದೆ. ನಾನ್ ಬೇಲಬಲ್ ವಾರಂಟ್ ಪಡೆದಂಥ ಒಬ್ಬ ಮನುಷ್ಯ ಜೂನ್ 23ನೇ ತಾರೀಖು ಈ ದೇಶದ ಪ್ರಧಾನ ಮಂತ್ರಿಯವರನ್ನು ಭೇಟಿಯಾಗಿ ದೆಹಲಿಯಿಂದ ವಾಪಸ್ ಹೋಗಿದ್ದಾರೆ. ಇದು ಒಂದು ಪ್ರಶ್ನೆ. ಇನ್ನೊಂದು ಪ್ರಶ್ನೆ ಗಾಂಧಿಯ ಮೊಮ್ಮಗನ ಮಗ ತುಷಾರ್ ಗಾಂಧಿ ಅವರು ಹಾಕಿರುವ ಒಂದು ಕೇಸ್ ಬಾಂಬೆಯಲ್ಲಿ ರಿಜಿಸ್ಟ್ರಾಗಿದೆ. ಸ್ಟಾರ್ ಟಿ.ವಿ. . .

MR. SPEAKER:- I will tell you, all that may be true: But what is the question before the Assembly ಸರ್ಕಾರ ಆದಕ್ಕೇನಾದರೂ ಜಮೀನು ಕೊಟ್ಟಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ ಎಂದು. ಅವರು ಕ್ಲಿಯರ್ ಆಗಿ ಹೇಳಿದ್ದಾರೆ 'ಇಲ್ಲ' ಎಂದು. ಅದರ ಪ್ರಶ್ನೆಯೇ ಇಲ್ಲ ಎಂದು. ನಿಮ್ಮ ಉಪಪ್ರಶ್ನೆಗಳೆಲ್ಲಾ ಕೂಡಾ ಯಾವ ಆಧಾರದ ಮೇಲೆ ಇರಬೇಕು?

SRI. G.V. SRIRAMA REDDY:- Infructuous ಅಲ್ಲ. ಯಾವ ಆಧಾರದ ಮೇಲೆ ಎಂದರೆ ಒಂದನೆ ಆಧಾರ ರೂಪರ್ಟ್ ಮುರ್ಡೋಕ್ ಕರ್ನಾಟಕ ರಾಜ್ಯ ಸರ್ಕಾರದ ಜೊತೆ ಭೂಮಿಯನ್ನು ಪಡೆಯುವುದರ ಬಗ್ಗೆ ಅವರ ಪ್ರತಿನಿಧಿಗಳು ಸರ್ಕಾರದ ಜೊತೆ ಮಾತುಕತೆ ನಡೆಸಿದ್ದಾರೆ.

ಅಧ್ಯಕ್ಷರು:- ಅವರು 'ಇಲ್ಲ' ಎಂದು ಹೇಳಿದ್ದಾರೆ. What is the basis?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅವರು 'ಇಲ್ಲ' ಎಂದು ಹೇಳಿದರೆ ನಮಗೆ ಬಂದಿರುವ ಮಾಹಿತಿಯನ್ನು ನಾವು ಹೇಳುತ್ತಿದ್ದೇವೆ. 'ಇಲ್ಲ' ಎಂದು ಹೇಳಿದ್ದಾರೆ, ಎಲ್ಲಾ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದ್ದೇನೆ.

ಶ್ರೀ ಎಸ್. ಕೃಷ್ಣಪ್ಪ:- ಪತ್ರಿಕೆಯಲ್ಲಿ ಬಂದರೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ವಿಷಯ ಹೇಳಿದ್ದು ಪತ್ರಿಕೆಯ ಆಧಾರದ ಮೇಲೆ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲ ಎಂದರೂ ಜಮೀನು ಕೊಡುವುದಕ್ಕೆ ಇದರ ಬಗ್ಗೆ ಮಾತುಕತೆ ನಡೆಯುತ್ತಿದೆಯೋ? ವ್ಯವಹಾರ ನಡೆಯುತ್ತಿದೆಯೋ? ಅವರು ಬಂದು ಬಂದು ಭೇಟಿ ಮಾಡುವುದನ್ನು ಇಲ್ಲ ಎಂದು ಹೇಳುತ್ತಿರೋ? ದಯವಿಟ್ಟು ಹೇಳಿ.

ಶ್ರೀ ಎಂ.ಸಿ. ನಾಣಯ್ಯ:- ಇದರ ಬಗ್ಗೆ ಯಾವುದೇ ಮಾತುಕತೆ ಆಗಿಲ್ಲ, ಪ್ರಸ್ತಾವನೆ ಇಲ್ಲ, ಏನೂ ನಡೆದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ವಿದೇಶೀ ಮಾಧ್ಯಮಗಳನ್ನು ಭಾರತಕ್ಕೆ ತರಬಾರದು ಎನ್ನ-ತಕ್ಕದ್ದು ನಮ್ಮ ಭಾರತ ದೇಶದ ಒಂದು ಸ್ಪಷ್ಟ ನೀತಿ ಇದೆ. ಆ ರೀತಿ ಏನಾದರೂ ಬರುವುದಿದ್ದರೆ ಮಾತುಕತೆ ಆಡುವುದಿದ್ದರೆ, ಅದನ್ನು ಸ್ಪಷ್ಟವಾಗಿ ನಿಲ್ಲಿಸುವುದಕ್ಕೆ ತಾವು ತಯಾರಾಗಿರಬೇಕು ಎನ್ನ-ತಕ್ಕದ್ದು. ಆದರಲ್ಲೆ ಏನೋ ನೀವು ಮಾಡಿದ್ದೀರಿ ಎಂದಲ್ಲ. ಮುಂದೇನಾದರೂ ಅವರು ಮಾತುಕತೆಗೆ ಬಂದರೆ ಆಗ ಏನು ಮಾಡಬೇಕು ಎಂಬುದು ಮುಖ್ಯ. ಏಕೆಂದರೆ ತುಮಕೂರು ಹತ್ತಿರ ಎಂಟು ಸಾವಿರ ಎಕರೆ ಕೊಡುವುದಕ್ಕೆ ಜಾಗವೇ ಇಲ್ಲ. ಆ ಪರಿಸ್ಥಿತಿ ನಿರ್ಮಾಣ ಆಗಿದೆ. ಅದಕ್ಕಾಗಿ ತಾವು ಯಾವುದೇ ಕಾರಣಕ್ಕೆ ವಿದೇಶಿ ಮಾಧ್ಯಮ ಇಂಡಿಯಾ ದೇಶಕ್ಕೆ ಬರಬಾರದು, ಕರ್ನಾಟಕಕ್ಕೂ ಬರಬಾರದು ಎನ್ನತಕ್ಕ ನೀತಿಯನ್ನು ತಾವು ಅನುಸರಿಸುತ್ತೀರೋ?

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಈಗ ಸ್ಟಾರ್ ಟಿ.ವಿ. ಎಂದು ಹೇಳುತ್ತಾ ಇರ-ತಕ್ಕದ್ದು, ಇವತ್ತು ಕೇಬಲ್ ನೆಟ್‌ವರ್ಕ್‌ನಲ್ಲಿ ಅವರು ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ಅದು ನಮಗೆ ಗೊತ್ತಿದೆ. ಆದರೆ ಇನ್ನು ಇವರು ಕೇಳುತ್ತಿರತಕ್ಕ ವಿಚಾರ, ಎತ್ತಿರತಕ್ಕ ವಿಚಾರದ ಬಗ್ಗೆ ನಾನು ಪತ್ರಿಕೆಯಲ್ಲಿ ಓದಿದೆ. ಅಪ್‌ಲಿಂಕ್ ಮಾಡುವುದಕ್ಕೋಸ್ಕರ ಬಹುಶಃ ತುಮಕೂರಿನಲ್ಲಿ ಎಲ್ಲೋ ಅದನ್ನು ಕೇಳುತ್ತಿದ್ದಾರೆ ಎನ್ನುವುದು ಪತ್ರಿಕೆಯಲ್ಲಿ ಬಂದಿದೆ ಎನ್ನುವುದನ್ನು ಕೇಳಿದೆ. ನಮ್ಮ ಸರ್ಕಾರದ ಮುಂದೆ ಯಾವುದೇ ಆ ತರಹದ ಪ್ರಸ್ತಾವನೆ ಇಲ್ಲ. ಯಾರೂ ಮಾತುಕತೆಗೆ ಬರಲಿಲ್ಲ. ಮಾತುಕತೆಗೆ ಬರುತ್ತಿರತಕ್ಕ ಪರಿಸ್ಥಿತಿ ಇಲ್ಲ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ:- ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಆಗಿದೆ ಎಂದು ಹೇಳ-ತಕ್ಕದ್ದನ್ನು ಪತ್ರಿಕೆಯಲ್ಲಿ ಬಂದಾಗ ನಿಮ್ಮ ಸರ್ಕಾರದ ವತಿಯಿಂದ ಯಾರೂ ನಿರಾಕರಿಸಲಿಲ್ಲ ಏಕೆ?

ಶ್ರೀ ಎಂ.ಸಿ. ನಾಣಯ್ಯ :- ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ ಎಂದು ಸುದ್ದಿ ಬಂದರೆ ಆ ಪತ್ರಿಕೆಯಲ್ಲಿ ಬಂದಿರತಕ್ಕ ಸುದ್ದಿ ಸತ್ಯಕ್ಕೆ ದೂರವಾಗಿರತಕ್ಕದ್ದು; ಪತ್ರಿಕೆಯಲ್ಲಿರತಕ್ಕ ವಿಚಾರವನ್ನು ನೀವು ನಂಬುವುದಾದರೆ ಸರ್ಕಾರ ನಂಬುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ:- ನಾನು ನಂಬುತ್ತಾ ಇಲ್ಲ ನೀವು ನಿರಾಕರಿಸಲಿಲ್ಲ ಏಕೆ ಎಂದು ನಾನು ಹೇಳುತ್ತಿರುವುದು.

ಶ್ರೀ ಟಿ.ಬಿ. ಜಯಚಂದ್ರ:- ಅವರು ಈಗಾಗಲೇ ಇಲ್ಲ ಎಂದು ಹೇಳಿಬಿಟ್ಟಿದ್ದಾರೆ.

ಅಧ್ಯಕ್ಷರು:- ಆದ್ದರಿಂದ ಉಪ ಪ್ರಶ್ನೆ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ಪತ್ರಿಕೆಗೆ ಬಂದಿರತಕ್ಕ ವಿಷಯವನ್ನೇ ಆಧಾರವಾಗಿಟ್ಟುಕೊಂಡು

ನಾವು ಇವತ್ತು ಪ್ರಶ್ನೆ ಹಾಕಿರತಕ್ಕದ್ದು. "ಇಲ್ಲ" ಎಂದು ಹೇಳಿದ ಮೇಲೆ ಬಹುಶಃ ಅದರ ಬಗ್ಗೆ ಕೇಳುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು:- ಶಿವಕುಮಾರ್ ಅವರು ಹಾಂಕಾಂಗ್, ಚೈನಾಗೆ ಯಾವಾಗ ಟ್ರಾನ್ಸ್‌ಫರ್ ಆಗುವುದರ ಬಗ್ಗೆ ಏನಾದರೂ ಕೇಳುತ್ತೀರೋ?

ಶ್ರೀ ಜಿ.ಬಿ. ಶಿವಕುಮಾರ್:- ನನ್ನದು ಒಂದು ನಿಮಿಷ ಇದೆ. ಇದಾದ ತಕ್ಷಣ ಕೇಳುತ್ತೇನೆ.

ಅಧ್ಯಕ್ಷರು:- ಇಲ್ಲ ಕುಳಿತುಕೊಳ್ಳಿ ಸುಮ್ಮನೆ ತಮಾಷೆಗೆ ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವರಿಗೆ ಹಾಂಕಾಂಗ್, ಚೈನಾಗೆ ಅವಕಾಶ ಕೊಡುವ ಮುಂಚೆ ನಮಗೆ ಕೃಷ್ಣಾ ಕಾವೇರಿ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಹಾಯ ಮಾಡುತ್ತೀರೋ ಎನ್ನುವುದು ನಮ್ಮ ಪ್ರಶ್ನೆ.

ಶ್ರೀ ಜಿ.ಬಿ. ಶಿವಕುಮಾರ್:- ಕೃಷ್ಣಾ ಜಲಾನಯನ ಪ್ರದೇಶಕ್ಕೂ ಮತ್ತು ಕಾವೇರಿ ವ್ಯತ್ಯಾಸದ ಬಗ್ಗೆ ನನ್ನದೊಂದು ವಿಚಾರ ರೂಲ್ 69ರಲ್ಲಿ ಕಳುಹಿಸಿಕೊಟ್ಟಿದ್ದೇನೆ.

(5) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಒಂದನೇ ಆಗಸ್ಟ್ 96ರ ಹತ್ತೊಂಭತ್ತನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 50 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ವಿಜಾಪುರದಲ್ಲಿರುವ ಸಾರ್ವಜನಿಕ ಗ್ರಂಥಾಲಯ ಹಾಗೂ ರೇಡಿಯೋ ಮೈದಾನ ಕುರಿತು.

1051 (1967) **ಶ್ರೀ ಬಸನಗೌಡ ರಾ. ಪಾಟೀಲ್, (ವಿಜಾಪುರ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರಸಭೆಯ ಹತ್ತಿರವಿರುವ ಸಾರ್ವಜನಿಕ ಗ್ರಂಥಾಲಯ ಹಾಗೂ ರೇಡಿಯೋ ಮೈದಾನದ ಭೂ ಹಕ್ಕುದಾರರು ಯಾರು? ಈ ಆಸ್ತಿಯನ್ನು ನೀಡಿರುವ ಹಿಂದಿನ ಹಕ್ಕುದಾರರು ನಿರ್ದಿಷ್ಟವಾಗಿ ಸೂಚಿಸಿರುವ ಉಪಯೋಗಕ್ಕಾಗಿಯೇ ಬಳಸಲಾಗುತ್ತಿದೆಯೇ?

ಆ) ನಗರಸಭೆ ಈ ಸ್ಥಳದಲ್ಲಿ ವಾಣಿಜ್ಯ ಸಂಕೀರ್ಣ ಮಾಡಲು ಉದ್ದೇಶಿಸಿದೆಯೇ? (ಸಂಪೂರ್ಣ ವಿವರ ನೀಡುವುದು)

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಸಾರ್ವಜನಿಕ ಗ್ರಂಥಾಲಯ ಇಲಾಖೆ ಮತ್ತು ಬಿಜಾಪುರ ನಗರಸಭೆ. ಈ ಆಸ್ತಿಗಳನ್ನು ನಿಗದಿಪಡಿಸಿದ ಉಪಯೋಗಕ್ಕಾಗಿಯೇ ಬಳಸಲಾಗುತ್ತಿದೆ.